ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 23–09–2020

# ಪತ್ರಿಕಾ ಪ್ರಕಟಣೆ

## ರೇಸ್ ಕೋರ್ಸ್ ಸ್ಥಳಾಂತರ ಇಲ್ಲ : ಜೆ.ಸಿ.ಮಾಧುಸ್ವಾಮಿ

ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) : ರೇಸ್ ಕೋರ್ಸ್‌ನ್ ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವುದರಿಂದ ಸ್ಥಳಾಂತರ ಸಾಧ್ಯ ಇಲ್ಲ ಎಂದು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ತಿಳಿಸಿದರು.

ಅವರು ಇಂದು ವಿಧಾನಪರಿಷತ್‌ನ ಕಲಾಪದಲ್ಲಿ ಮುಖ್ಯಮಂತ್ರಿಗಳ ಪರವಾಗಿ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ರೇಸ್ ಕೋರ್ಸ್‌ಗಳಿಗೆ ಪರವಾನಗಿ ನೀಡುವ ಪ್ರಸ್ತಾವನೆ ಹಾಗೂ ವಿಧೇಯಕವನ್ನು ಮಂಡಿಸಿದಾಗ, ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, ನಾರಾಯಣ ಸ್ವಾಮಿ ಮಾತನಾಡಿ, ನಗರದ ಹೃದಯ ಭಾಗದಲ್ಲಿರುವ ರೇಸ್ ಕೋರ್ಸ್‌ನ್ನು ಹೊರವಲಯಕ್ಕೆ ಸ್ಥಳಾಂತರಿಸಬೇಕೆಂದು ಹಲವಾರು ಬಾರಿ ಚರ್ಚೆಯಾದರು ಅದು ಸಾಧ್ಯವಾಗಿಲ್ಲ ಎಂದಾಗ ಸಚಿವರು ಸ್ಥಳಾಂತರ ಸಾಧ್ಯವಿಲ್ಲ ಎಂದರು.

ಕರ್ನಾಟಕ ರೇಸ್ ಕೋರ್ಸ್‌ಗಳ ಕೆಲವು ನಿಯಮಾವಳಿಗೆ ಕೆಲವು ಸಣ್ಣ ಪುಟ್ಟ ತಿದ್ದುಪಡಿ ತರಲಾಗಿದೆ. ಸೆಕ್ಷನ್ 4,5,6,7ರ ನಿಯಮಗಳನ್ನು ಉಲ್ಲಂಘನೆ ಮಾಡಿದ ವೇಳೆ 500 ರೂ. ಇದ್ದ ದಂಡದ ಪ್ರಮಾಣವನ್ನು 50 ಸಾವಿರಕ್ಕೆ , ಒಂದು ಸಾವಿರ ಇದ್ದ ದಂಡದ ಪ್ರಮಾಣವನ್ನು 1 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಪರವಾನಗಿ ಇಲ್ಲದೆ ರೇಸ್ ನಡೆಸಿದರೆ, ಮಾಲೀಕರು ರೇಸ್‌ನಲ್ಲಿ ಭಾಗವಹಿಸಿದರೆ ದಂಡ ವಿಧಿಸಲಾಗುತ್ತದೆ ಎಂದರು.

## ಪರಿಷತ್ತಿನಲ್ಲಿ ಇಂದು ಹಲವು ವಿಧೇಯಕಗಳ ಮಂಡನೆ

ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) :

"ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2020" ನ್ನು ಕಂದಾಯ ಸಚಿವರ ಆರ್.ಅಶೋಕ್ ಅವರ ಪರವಾಗಿ ಜೆ.ಸಿ.ಮಾಧುಸ್ವಾಮಿ ಅವರು ಮಂಡಿಸಿದರು. ಕ್ಷೇತ್ರದ ಅಭಿವೃದ್ಧಿಗಾಗಿ 3 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2020ನ್ನು ಕಾರ್ಮಿಕ ಮತ್ತು ಸಕ್ಕರೆ ಸಚಿವ ಆರಬೈಲ್ ಹೆಬ್ಬಾರ ಶಿವರಾಮ್ ಮಂಡಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರಾದ ನಾರಾಯಣಸ್ವಾಮಿ ಮಾತನಾಡಿ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗ ಕಲ್ಪಿಸುವಂತೆ ತಿದ್ದುಪಡಿ ಮಾಡಿ ಅಂಗೀಕರಿಸಬೇಕೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಮುಂದುವರೆದು ಮಾತಾನಾಡಿದ ವಿಧಾನಪರಿಷತ್ ಸದಸ್ಯೆ ಡಾ: ತೇಜಸ್ವಿನ ಗೌಡ ಅವರು ಕೈಗಾರಿಕೆಗಳಿಗೆ ಕೃಷಿ ಭೂಮಿಯನ್ನು ನೀಡದೆ, ಬಂಜರು ಭೂಮಿಯನ್ನು ಅಭಿವೃದ್ಧಿಗಾಗಿ ನೀಡಬೇಕು. ಖಾಸಗಿ ಸಂಸ್ಥೆಯವರಿಗೆ ನೀಡಿದಾಗ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವುದರೊಂದಿಗೆ ಉದ್ಯೋಗ ಮತ್ತು ಜೀವನಕ್ಕೆ ಭದ್ರತೆ ಒದಗಿಸಬೇಕೆಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 2020, ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ 2020, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ವಿಧೇಯಕ (ತಿದ್ದುಪಡಿ) 2020ನ್ನು ಅಂಗೀಕರಿಸಲಾಯಿತು.

## ಕೋವಿಡ್–19 ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ಅಕ್ರಮ ನಡೆದಿಲ್ಲ – ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್

ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) : ಕೋವಿಡ್–19 ವಿಷಯದಲ್ಲಿ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ಯಾವುದೇ ಅಕ್ರಮ ನಡೆದಿರುವುದಿಲ್ಲ ಹಾಗೂ ಗುಣಮಟ್ಟದ ಉಪಕರಣಗಳನ್ನು ಖರೀದಿಸಿದ ಬೆಲೆಯನ್ನು ಇತರೆ ರಾಜ್ಯಗಳ ಖರೀದಿಗೆ ಹೋಲಿಕೆ ಮಾಡಿ ಆರೋಪ ಮಾಡುತ್ತಿರುವುದರಲ್ಲಿ ಸತ್ಯಾಂಶ ಇಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ಅವರು ತಿಳಿಸಿದರು.

ಇಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡಿ ರಾಜ್ಯದಲ್ಲಿ ಕೋವಿಡ್ ಸಮಯದಲ್ಲಿ ಅಕ್ರಮ ನಡೆದಿದ್ದು, ಸರ್ಕಾರ ಉತ್ತರಿಸುವಂತೆ ಕೇಳಿದಾಗ ಮಾತನಾಡಿದ ಸಚಿವರು ಯಾವುದೇ ಉಪಕರಣಗಳು

ಅವುಗಳ ಗುಣಮಟ್ಟ ಹಾಗೂ ನಾವೀನ್ಯತೆ ಮತ್ತು ವೈಶಿಷ್ಟತೆಗಳ ಆದಾರದ ಮೇಲೆ ಬೆಲೆಯನ್ನು ನಿಗಧಿ ಪಡಿಸಲಾಗಿರುತ್ತದೆ. ಅವುಗಳ ಆದಾರದ ಮೇಲೆ ಉತ್ತಮ ಗುಣಮಟ್ಟದ ವೈದ್ಯಕೀಯ ಉಪಕರಣಗಳನ್ನು ಖರೀದಿಸಲಾಗಿದೆ ಎಂದು ಹೇಳಿದರು.

ಇತರೆ ರಾಜ್ಯಗಳು ಕಡಿಮೆ ಬೆಲೆಯಲ್ಲಿ ಖರೀದಿಸಿರುವ ಉಪಕರಣಗಳನ್ನು ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ಬೆಲೆ ನೀಡಿ ಖರೀದಿಸಲಾಗಿದೆ ಎಂಬ ಆರೋಪದಲ್ಲಿ ಗುಣಮಟ್ಟದ ಬಗ್ಗೆ ಮಾತಿಲ್ಲ. ಅವರು ಹಾಗೂ ನಾವು ಖರೀದಿಸಿರುವ ಉಪಕರಣಗಳ ತಾಂತ್ರಿಕ ಗುಣಮಟ್ಟವನ್ನು ಹೋಲಿಕೆ ಮಾಡಿ ನೋಡಿ ಮಾತನಾಡಿ ಎಂದು ತಿಳಿಸಿದರು.

ಹೈ-ಡೆಫಿನೇಷನ್, ಬಹು-ಉಪಯೋಗಿ ಹಾಗೂ 54 ವಿವಿಧ ತಂತ್ರಾಂಶಗಳನ್ನು ಹೊಂದಿರುವ ಉತ್ತಮ ಗುಣಮಟ್ಟದ ವೆಂಟಿಲೇಟರ್‌ಗಳನ್ನು ನಮ್ಮ ರಾಜ್ಯದಲ್ಲಿ ಖರೀದಿಸಲಾಗಿದ್ದು, ವೆಂಟಿಲೇಟರ್‌ಗಳು ಬೇಸಿಕ್ ಮಾಡೆಲ್‌ಗಳು 4 ಲಕ್ಷ ರೂ.ಗಳಿಂದ ಪ್ರಾರಂಭವಾಗಿ ವಿವಿಧ ರೀತಿಯ ಗುಣಮಟ್ಟದ ವೆಂಟಿಲೇಟರ್‌ಗಳ ಬೆಲೆಯಲ್ಲಿ ವ್ಯತ್ಯಾಸವಿರುತ್ತದೆ ಎಂದು ಹೇಳಿದರು.

ಇದೇ ಸಮಯದಲ್ಲಿ ಶಿಕ್ಷಣ ಸಚಿವರ ಉತ್ತರಕ್ಕೆ ತೃಪ್ತಿಪಡದ ವಿರೋದ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಮದ್ಯೆ ಮಾತಾನಾಡಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವೈದ್ಯಕೀಯ ಶಿಕ್ಷಣ ಸಚಿವರು ನೀಡಿರುವ ಲಿಖಿತ ರೂಪದ ಉತ್ತರವನ್ನು ಪರಿಶೀಲಿಸಿ ಮಾತನಾಡಿ ಎಂದು ಸಲಹೆ ನೀಡಿದರು.

# ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) :**

**2020-21** ನೇ ಸಾಲಿನ ಪರಿಶಿಷ್ಟ ಜಾತಿ ಉಪ ಯೋಜನೆ/ಪರಿಶಿಷ್ಟ ಪಂಗಡ ಉಪ ಯೋಜನೆ ಅಡಿಯಲ್ಲಿ ಅಂತಾರಾಷ್ಟ್ರೀಯ/ರಾಷ್ಟ್ರೀಯ/ರಾಜ್ಯ ಮಟ್ಟದಲ್ಲಿ ವಿಜೇತರಾದ ಪ.ಜಾತಿ/ಪ.ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮದ ಕುರಿತು ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು **31-08-2020** ಕೊನೆಯ ದಿನಾಂಕವಾಗಿತ್ತು.

ತಾಂತ್ರಿಕ ದೋಷದಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ ಎಂಬ ದೂರುಗಳ ಹಿನ್ನಲೆಯಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಲು ಕ್ರೀಡಾಪಟುಗಳ ಕೋರಿಕೆ ಮೇರೆಗೆ ಸೆಪ್ಟೆಂಬರ್ 24 ರವರೆಗೆ 10 ದಿನಗಳ ಕಾಲ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಅವಧಿ ವಿಸ್ತರಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಭೂ-ಒಡೆತನ ಯೋಜನೆಯಡಿ ಜಮೀನು ಖರೀದಿ

ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) :

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಭೂ ಒಡೆತನ ಯೋಜನೆಯಡಿ ಜಮೀನು ಖರೀದಿಸಲು ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಪತ್ರಿಕೆಯಲ್ಲಿ ಪ್ರಕಟಗೊಂಡ 7 ದಿನಗಳೊಳಗಾಗಿ ಈ ಕಚೇರಿಗೆ ಲಿಖಿತವಾಗಿ ದೂರು ಸಲ್ಲಿಸಲು ತಿಳಿಸಲಾಗಿದೆ.

ಭೂ-ಮಾಲೀಕರ ವಿವರ ಇಂತಿದೆ.

ಎಸ್.ಕೆ. ಪ್ರಕಾಶ್ ಕುಮಾರ್ ಬಿನ್ ಸತ್ಯನಾರಾಯಣಶೆಟ್ಟಿ, ತಮ್ಮಗಾನಹಳ್ಳಿ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು ಜಾತಿ ಆರ್ಯವೈಶ್ಯ ಸರ್ವೆ ಸಂಖ್ಯೆ 65/3 ಜಮೀನಿನ ವಿಸ್ತೀರ್ಣ 2.36 ಜಮೀನು ಇರುವ ಸ್ಥಳ ತಮ್ಮಗಾನಹಳ್ಳಿ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ, ತಾಲ್ಲೂಕು

ಎಸ್.ಎಸ್. ಅಶ್ವತ್ಥನಾರಾಯಣಶೆಟ್ಟಿ, ಬಿನ್ ಸಕಾಲಕೃಷ್ಣಮೂರ್ತಿ, ತಮ್ಮಗಾನಹಳ್ಳಿ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು ಜಾತಿ/ಉಪಜಾತಿ ಆರ್ಯವೈಶ್ಯ, ಸರ್ವೆ ಸಂಖ್ಯೆ 63 ಮತ್ತು 64/1 ಜಮೀನಿನ ವಿಸ್ತೀರ್ಣ 3.15 ಮತ್ತು 4.10 ತಮ್ಮಗಾನಹಳ್ಳಿ, ಸಾಸಲು ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಈ ಜಮೀನು ಖರೀದಿಸಲು ಸಾರ್ವಜನಿಕರಿಂದ ಆಕ್ಷೇಪಣೆಗಳು ಇದ್ದಲ್ಲಿ ಪತ್ರಿಕೆಯಲ್ಲಿ ಪ್ರಕಟಗೊಂಡ 7 ದಿನಗಳೊಳಗಾಗಿ ಈ ಕಚೇರಿಗೆ ಲಿಖಿತವಾಗಿ ದೂರು ಸಲ್ಲಿಸಲು ತಿಳಿಸಲಾಗಿದೆ. ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂರವಾಣಿ ಸಂಖ್ಯೆ 080-29781036 ನ್ನು ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## Special Electoral Summary Revision 2020

## Revised Schedule of SSR 2021 for the State of Karnataka

**Bengaluru, September 23 (Karnataka Information)**

**Rationalization/Re-arrangements of Polling Stations 10-08-2020 to 31-10-2020. Removal of Discrepancies of DSEs and EPICs (The DSE within part to be removed by 31-08-2020)**

**31-08-2020 (within parts) 30-09-2020 (across parts) (iii) Recasting of Section/Parts and finalization of proposed restricting of section/part boundaries location of polling stations and getting approval of list of polling stations. 31-10-2020.**

**Preparation Format 1 to 8 Preparation of Supplements and integrated draft roll 01-11-2020(Sunday) to 15-11-2020 (Sunday)**

**Revision Activities:**

**Publication of Integrated draft electoral roll 18-11-2020 (Revised Date)**

**Period of filing claims and objections 18-11-2020 (Wednesday) to 17-12-2020 (Thursday) (Revised Dates) Special Campaign dates a) 22-11-2020 (Sunday) 29-11-2020 (Sunday) 06-12-2020 (Sunday) 13-12-2020 (Sunday)**

**Disposal of claims and objections 07-01-2020 (Thursday) (Revised Date)**

**Checking of health parameters and obtaining Commission's permission for final publication and Updating database and printing of supplements 14-01-2020 (Thursday) Final publication of electoral roll 18-01-2020 (Monday) (Revised Date)**

# Conduct of Army Recruitment Rally

**Bengaluru, September 23 (Karnataka Information)**

**Army Recruiting Office, Bangalore is the coordinating and conducting agency for Army Recruitment rallies for the youths of 13 districts of South Karnataka.**

**An Army Recruitment Rally will be conducted during the period from 19 September 2020 to 31 March 2021 (exact date, location and venue of rally will be confirmed later as per COVID-19 pandemic situation) Further details can be obtained from www.joinindianarmy.nic.in. says official press release.**

## ಭಾರತೀಯ ಸೇನೆಯ ನೇಮಕಾತಿ ಪ್ರಾಧಿಕಾರ(ಬೆಂಗಳೂರು) ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) :

ಭಾರತೀಯ ಸೇನೆಯ ನೇಮಕಾತಿ ಪ್ರಾಧಿಕಾರ ಬೆಂಗಳೂರು ವತಿಯಿಂದ 2020-21 ನೇ ಸಾಲಿಗೆ ಅರ್ಹ ಪುರುಷ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಆನ್‌ಲೈನ್‌ನಲ್ಲಿ **www.joinindianarmy.nic.in** ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ನೇಮಕಾತಿ ರ‍್ಯಾಲಿಗಳನ್ನು 19-09-2020 ರಿಂದ 31-03-2021 ರವರೆಗೆ ನಡೆಸಲಾಗುವುದು. ಸರಿಯಾದ ದಿನಾಂಕ ಸ್ಥಳವನ್ನು ಕೋವಿಡ್ -19 ರ ಪರಿಸ್ಥಿತಿಯನ್ನು ನೋಡಿಕೊಂಡು ಪ್ರಕಟಿಸಲಾಗುವುದು.

ಬೆಂಗಳೂರು ನಗರ/ ಗ್ರಾಮಾಂತರ, ತುಮಕೂರು, ಮಂಡ್ಯ, ಮೈಸೂರು, ಬಳ್ಳಾರಿ, ಚಾಮರಾಜನಗರ, ರಾಮನಗರ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಯ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ 080-25596517, 080-29516517 ನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪಿ.ಎಂ. ಕಿಸಾನ್ ಯೋಜನೆ ಬ್ಯಾಂಕ್ ಖಾತೆಗೆ ಆಧಾರ ಜೋಡಿಸಲು ಸೂಚನೆ

ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) :

ರಾಜ್ಯ ಸರ್ಕಾರದಿಂದ ಪಿ.ಎಮ್ ಕಿಸಾನ್ ಕರ್ನಾಟಕ ಯೋಜನೆಯಡಿ ವಾರ್ಷಿಕ 4000 ರೂ.ಗಳ ಆರ್ಥಿಕ ನೆರವು ಪಡೆಯಲು ತಮ್ಮ ಆಧಾರ್ ಸಂಖ್ಯೆಯನ್ನು ತಮ್ಮ ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಸಲು ಹಾಗೂ ಆರ್ಥಿಕ ನೆರವು ಜಮೆಯ ಸ್ಥಿತಿ ಪರಿಶೀಲಿಸಲು **https://fruits.karnataka.gov.in/Reports/FarmerPaymentDetails.aspx** ವೆಬ್‌ಲಿಂಕ್‌ನ್ನು ವೀಕ್ಷಿಸಿ ಹಾಗು ಬ್ಯಾಂಕ್ ಖಾತೆಗೆ ಸಂಬಂಧಿಸಿದ ಸಮಸ್ಯೆಯಿದ್ದಲ್ಲಿ ತಮ್ಮ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ ದಾಖಲೆಗಳನ್ನು ಸರಿಪಡಿಸಿಕೊಳ್ಳಲು ಕೃಷಿ ಇಲಾಖೆಯ ಪ್ರಕಟಣೆ ತಿಳಿಸಿದೆ.

# BWSSB water Adalath on September 24th

Bengaluru, Sep 23 (Karnataka Information): BWSSB water Adalath is being held on 24.09.2020 in AEE (South Village-2), (South East-5), (West Village-1), (South West -4), (East Village-3), (East Village-1), (North West-5), (North East-3), and (North -1) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath will be held is as follows.

| Sub-division | Address | Phone Number |
|---|---|---|
| **(South Village-2)** | Central Jail Road, Koodlu GLR , Koodlu,Bangalore. | 9845444090 |
| **(South East-5)** | Kapila Bhavan, 1st floor, 4th 'T' Block, Jayanagar,<br>Bangalore-41 | 22945148 |
| **(West Village-1)** | 4th Block, BSK 6th Stage, Pavanapura, Opp Raghavendra Swamy Temple, Lingadheeranahalli, Bangalore-62 | 9845444034 |
| **(South West -4)** | 1st floor, Banagiri Nagar, Near Water Tank, Banashankari 3rd Stage, 1st main road, Bangalore.85 | 22945198 |
| **(East Village-3)** | Central Jail Road, Koodlu GLR , Koodlu, New Road, Aralur, Bangalore. | 9591987951 |
| **(East Village-1)** | Banjara Layout, STP Premises, Horamavu, Bangalore. | 9945233444 |
| **(North West-5)** | Behind Sriram Deluxe Hotel, Peenya 2nd Stage, Near BMTC Bus Stop. Bangalore-58 | 28372030 |
| **(North East-3)** | No.3, P&T Colony, RT Nagar, Bangalore-32 | 22945139 |

| | | |
|---|---|---|
| **(North-1)** | 8th Main Road, 'D' Block, Sahakar Nagar, Bangalore-92 | 9845444123 |

**The details of service stations coming under the subdivisions mentioned above are as follows:**

| Sub-division | Service Stations |
|---|---|
| **(South Village-2)** | Koodlu, Begur |
| **(South East-5)** | JP Nagar -1 &3, Jayanagar 4th 'T' Block, Jayanagar 4th Block, Hombegowda nagar, Byrasandra |
| **(West Village-1)** | Lingadheeranahalli, Hemmigepura,BSK 6th Stage |
| **(South West -4)** | BSK- 1&2, Kumaraswamy Layout, ISRO layout, Poorna Pragna layout, Banagirinagar |
| **(East Village-3)** | Araluru, Doddakannanahalli,Kasavanahalli |
| **(East Village-1)** | ISPS, Horamavu , Rajacanal |
| **(North West-5)** | Peenya Dasarahalli, Peenya, Lingadheeranahalli, Andarahalli |
| **(North East-3)** | RT Nagar, Kaval Byarasandra, Sanjayanagar, BEL Road,Ganganagar, Anand Nagar, Manorayanapalya |
| **(North -1)** | Sahakar Nagar, Jakkur, Kempapura (Coffee Board Lay out) |

For any problems regarding the water supply and all, publics can contact 24x 7 call centre: 22238888, helpline number: 1916 & whats app no: 8762228888. Public can utilize this adalath facilities to solve the problems regarding water supply. public are requested to follow all precautionary measures according to **Unlock-4.0** guidelines while attending the adalath.

# ಬೆಂಗಳೂರು ಜಲಮಂಡಳಿ ಸೆಪ್ಟೆಂಬರ್ 24 ರಂದು
# ನೀರಿನ ಅದಾಲತ್

**ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) :**

ಬೆಂಗಳೂರು ಜಲಮಂಡಳಿಯು ದಿನಾಂಕ:24.09.2020 ಗುರುವಾರ ದಂದು **(ದಕ್ಷಿಣ ವಿಲೇಜ್)-2, (ಆಗ್ನೇಯ -5), (ಪಶ್ಚಿಮ ವಿಲೇಜ್)-1, (ನೈರುತ್ಯ)-4, (ಪೂರ್ವ ವಿಲೇಜ್-3), (ಪೂರ್ವ ವಿಲೇಜ್-1), (ವಾಯುವ್ಯ-5), (ಈಶಾನ್ಯ -3) ಮತ್ತು (ಉತ್ತರ-1)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| **ಉಪವಿಭಾಗದ ಹೆಸರು** | **ವಿಳಾಸ** | **ದೂರವಾಣಿ ಸಂಖ್ಯೆ** |
|---|---|---|
| (ದಕ್ಷಿಣ ವಿಲೇಜ್)-2 | ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು,ಬೆಂಗಳೂರು | 9845444090 |
| (ಆಗ್ನೇಯ -5) | ಕಪಿಲ ಭವನ, 1ನೇ ಮಹಡಿ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು-41 | 22945148 |
| (ಪಶ್ಚಿಮ ವಿಲೇಜ್)-1 | 4ನೇ ಬ್ಲಾಕ್, ಬಿ.ಎಸ್.ಕೆ 6ನೇ ಹಂತ, ಪವನಪುರ, ರಾಘವೇಂದ್ರ ಸ್ವಾಮಿ ದೇವಸ್ಥಾನದ ಮುಂಭಾಗ, ಅಂಗಧೀರನಹಳ್ಳಿ.ಬೆಂಗಳೂರು-62 | 9845444034 |
| (ನೈರುತ್ಯ)-4 | ಮೊದಲನೇ ಮಹಡಿ, ಬನಗಿರಿನಗರ, ವಾಟರ್ ಟ್ಯಾಂಕ್ ಪಕ್ಕ, ಬನಶಂಕರಿ 3ನೇ ಹಂತ, 1ನೇ ಮುಖ್ಯರಸ್ತೆ,ಬೆಂಗಳೂರು-85 | 22945198 |
| (ಪೂರ್ವ ವಿಲೇಜ್-3) | ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು, ಹೊಸ ರಸ್ತೆ, ಅರಳೂರು, ಬೆಂಗಳೂರು | 9591987951 |
| (ಪೂರ್ವ ವಿಲೇಜ್-1) | ಬಂಜಾರ ಲೇಔಟ್, ಎಸ್.ಟಿ.ಪಿ ಆವರಣ, ಹೊರಮಾವು, ಬೆಂಗಳೂರು | 9945233444 |
| (ವಾಯುವ್ಯ-5) | ಶ್ರೀರಾಮ ಡಿಲಕ್ಸ್ ಹೋಟೆಲ್ ಹಿಂಭಾಗ, ಪೀಣ್ಯ 2ನೇ ಹಂತ, ಬಿಎಂಟಿಸಿ ಬಸ್ ನಿಲ್ದಾಣದ ಹತ್ತಿರ ಬೆಂಗಳೂರು-58 | 28372030 |
| (ಈಶಾನ್ಯ -3) | ನಂ.3, ಪಿ&ಟಿ ಕಾಲೋನಿ, ಆರ್.ಟಿ.ನಗರ, ಬೆಂಗಳೂರು-32 | 22945139 |

| | | |
|---|---|---|
| (ಉತ್ತರ–1) | 8ನೇ ಮುಖ್ಯ ರಸ್ತೆ, 'ಡಿ' ಬ್ಲಾಕ್, ಸಹಕಾರನಗರ, ಬೆಂಗಳೂರು–92 | 9845444123 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

| **ಉಪವಿಭಾಗದ ಹೆಸರು** | **ಸೇವಾಠಾಣೆಗಳು** |
|---|---|
| (ದಕ್ಷಿಣ ವಿಲೇಜ್)–2 | ಕೂಡ್ಲು, ಬೇಗೂರು |
| (ಆಗ್ನೇಯ –5) | ಜೆ.ಪಿ.ನಗರ–1 &3, ಜಯನಗರ 4ನೇ ಟಿ ಬ್ಲಾಕ್, ಜಯನಗರ 4ನೇ ಬ್ಲಾಕ್, ಹೊಂಬೇಗೌಡನಗರ, ಭೈರಸಂದ್ರ |
| (ಪಶ್ಚಿಮ ವಿಲೇಜ್)–1 | ಲಿಂಗಧೀರನಹಳ್ಳಿ, ಹೆಮ್ಮಿಗೆಪುರ,ಬನಶಂಕರಿ 6ನೇ ಹಂತ. |
| ( ನೈರುತ್ಯ)–4 | ಬಿ.ಎಸ್.ಕೆ –1 &2, ಕುಮಾರಸ್ವಾಮಿ ಲೇಔಟ್, ಇಸ್ರೋ ಲೇಔಟ್, ಪೂರ್ಣ ಪ್ರಜ್ಞಾ ಲೇಔಟ್, ಬನಗಿರಿನಗರ |
| (ಪೂರ್ವ ವಿಲೇಜ್–3) | ಅರಳೂರು, ದೊಡ್ಡ ಕಣ್ಣನಹಳ್ಳಿ, ಕಸವನಹಳ್ಳಿ |
| (ಪೂರ್ವ ವಿಲೇಜ್–1) | ಐ.ಎಸ್.ಪಿ.ಎಸ್, ಹೊರಮಾವು, ರಾಜಾಕೆನಲ್ |
| (ವಾಯುವ್ಯ–5) | ಪೀಣ್ಯ ದಾಸರಹಳ್ಳಿ, ಪೀಣ್ಯ, ಲಿಂಗಧೀರನಹಳ್ಳಿ, ಅಂದರಹಳ್ಳಿ |
| (ಈಶಾನ್ಯ –3) | ಆರ್.ಟಿ.ನಗರ, ಕಾವಲ್ ಬೈರಸಂದ್ರ, ಸಂಜಯನಗರ, ಬಿ.ಇ.ಎಲ್ ರಸ್ತೆ, ಗಂಗಾನಗರ, ಆನಂದನಗರ, ಮನೋರಾಯನಪಾಳ್ಯ |
| (ಉತ್ತರ–1) | ಸಹಕಾರನಗರ, ಜಕ್ಕೂರು, ಕೆಂಪಾಪುರ (ಕಾಫಿ ಬೋರ್ಡ್ ಲೇಔಟ್) |

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಹಾಗೂ **ಅನ್‌ಲಾಕ್–4.0** ರಮಾರ್ಗಸೂಚಿಯನ್ವಯ ಸಭೆಗೆ ಹಾಜಾರಾಗಲಿರುವ ಸಂದರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು

# ಎಸಿಬಿ ದಾಳಿ

**ಬೆಂಗಳೂರು, ಸೆಪ್ಟೆಂಬರ್ 23 (ಕರ್ನಾಟಕ ವಾರ್ತೆ) :**

ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ ಕಾವಲ್ ಗ್ರಾಮದ ಸರ್ವೆ ನಂ.3, ಮೂಲತಃ ಸರ್ಕಾರಿ ಜಮೀನಾಗಿದ್ದು, ಈ ಜಮೀನನ್ನು ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ, ಖಾಸಗಿ ವ್ಯಕ್ತಿಗಳಿಗೆ ಸರ್ಕಾರಿ ಜಮೀನನ್ನು ಪೋಡಿ ದುರಸ್ತಿ ಮಾಡಿಕೊಡುವ ಮುಖೇನ ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು ಕೋಟ್ಯಾಂತರ ರೂ.ಗಳ ಬೆಲೆ ಬಾಳುವ ಸರ್ಕಾರಿ ಜಮೀನನ್ನು ಖಾಸಗಿಯವರ ಪಾಲಾಗುವಂತೆ ಮಾಡಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿರುವ ಬಗ್ಗೆ ಕಂದಾಯ ಇಲಾಖೆಯ ಹಾಗೂ ಭೂಮಾಪನ ಇಲಾಖೆಯ ಕೆಲ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ.

ಭೂಮಾಪನ ಇಲಾಖೆಯ ಕೆಲ ಅಧಿಕಾರಿಗಳು ತಯಾರಿಸಿದ ದಾಖಲೆಗಳು, ಅಕ್ರಮ ದಾಖಲೆಗಳೆಂದು ಕಂಡು ಬಂದಿದ್ದರೂ ಸಹ, ಇವುಗಳನ್ನು ಬಳಸಿಕೊಂಡು ಕಂದಾಯ ಇಲಾಖೆಯ ಕೆಲ ಅಧಿಕಾರಿಗಳು ಕಾನೂನು ಬಾಹಿರವಾಗಿ ಸರ್ಕಾರಿ ಆಸ್ತಿಯನ್ನು ಮಂಜೂರಾತಿ ಮತ್ತು ಪೂರಕ ದಾಖಲೆಗಳಿಲ್ಲದೇ ಇದ್ದರೂ ನಿರಾಧಾರವಾದ ದಾಖಲೆಗಳೆಂದು ಪರಿಗಣಿಸಿ ಸುಮಾರು 18 ಎಕರೆ ಸರ್ಕಾರಿ ಜಮೀನನ್ನು ಖಾಸಗಿಯವರ ಹೆಸರಿಗೆ ಪ್ರತ್ಯೇಕ ಪಹಣಿಯನ್ನು ಸೃಷ್ಟಿಸಿ, ಮಾರಾಟ ಮಾಡಲು ನೇರವಾಗಿ ಸಹಕರಿಸಿರುತ್ತಾರೆ. ಈ ಮೂಲಕ ಕೆಲ ಕಂದಾಯ ಅಧಿಕಾರಿಗಳು ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ಸರ್ಕಾರಿ ಜಮೀನನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ವರ್ಗಾಹಿಸಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟು ಮಾಡಿರುವ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ಭೂದಾಖಲೆಗಳ ಜಂಟಿ ನಿರ್ದೇಶಕರು ನೀಡಿದ ದೂರಿನ ಮೇರೆಗೆ ಸಕ್ಷಮ ಪ್ರಾಧಿಕಾರದ ಅನುಮತಿ ಮೇರೆಗೆ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ.

ಪ್ರಕರಣದ ತನಿಖಾ ಕಾಲದಲ್ಲಿ ಕೆಲ ಅಧಿಕಾರಿಗಳು ಭೂಸುಧಾರಣೆ ಕಾಯ್ದೆ ನಿಯಮಗಳನ್ನು ಪಾಲಿಸದೇ ಕೆಲಸ ನಿರ್ವಹಿಸಿರುವುದು ಮತ್ತು ತಮ್ಮ ಕಾರ್ಯ ವ್ಯಾಪ್ತಿ ಮೀರಿ ಕರ್ತವ್ಯ ನಿರ್ವಹಿಸಿರುವುದು ಕಂಡು ಬಂದಿರುತ್ತದೆ.

ಈ ದಿನ ದಿನಾಂಕ: 22/09/2020 ರಂದು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ಠಾಣೆಯ ವಿವಿಧ ತಂಡಗಳಿಂದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಪಾದಿತ ಅಧಿಕಾರಿಗಳ ಹಾಗೂ ಖಾಸಗಿ ವ್ಯಕ್ತಿಗಳ ಮನೆ ಮತ್ತು ಕಛೇರಿಗಳ ಮೇಲೆ ದಾಳಿ ನಡೆಸಲಾಗಿರುತ್ತದೆ. ಈವರೆಗೆ ಶೋಧನೆ ನಡೆಸಲಾದ ಸ್ಥಳಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

1. ಶ್ರೀ ಉಮೇಶ್, ಭೂಮಾಪಕರು, ಬೆಂಗಳೂರು ದಕ್ಷಿಣ ತಾಲ್ಲೂಕು ಇವರ ಬೆಂಗಳೂರು ನಗರದ ನಾಗರಭಾವಿ 2ನೇ ಹಂತದಲ್ಲಿನ ವಾಸದ ಮನೆ.
2. ಶ್ರೀ ಉಮೇಶ್, ಭೂಮಾಪಕರು, ಇವರು ಕರ್ತವ್ಯ ನಿರ್ವಹಿಸುತ್ತಿರುವ ಕೆ.ಆರ್.ಪುರಂನ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ.
3. ಶ್ರೀ ಕಿಶೋರ್‌ಕುಮಾರ್, ಬಿಲ್ಡರ್ ಇವರ ನಗರ್ತರ ಪೇಟೆ, ವೇಣುಗೋಪಾಲಸ್ವಾಮಿ ದೇವಸ್ಥಾನದ ಹತ್ತಿರದ ಮನೆ ಮತ್ತು
4. ಶ್ರೀ ಕಿಶೋರ್‌ಕುಮಾರ್, ಬಿಲ್ಡರ್ ಇವರಿಗೆ ಸಂಬಂಧಪಟ್ಟ ಜೆ.ಪಿ ನಗರ, ಅವಲಹಳ್ಳಿ ಗೊಟ್ಟಿಗೆರೆ ಮುಖ್ಯರಸ್ತೆಯಲ್ಲಿನ ಕಛೇರಿ.

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಸ್ಥಳಗಳಲ್ಲಿ ಶೋಧನೆ ಕಾರ್ಯ ಕೈಗೊಂಡಿದ್ದು ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ.